**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿರವರು ನಿಯಮ-72 ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.** 157

**<u>ಸೂಚನೆ:-</u>**

**ರಾಜ್ಯದ ಕರಾವಳಿ ತೀರ ಪ್ರದೇಶದಲ್ಲಿ ಕಳೆದ 3 ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯಿಂದ ಬಂದರು ಜಟ್ಟಿಗಳು ಹಾಗೂ ಇತರೇ ಮೀನುಗಾರಿಕಾ ಪೂರಕ ಕಾಮಗಾರಿಗಳನ್ನು ಹಲವಾರು ಏಜೆನ್ಸಿಗಳ ಮೂಲಕ ನಿರ್ವಹಿಸಲಾಗಿದೆ. ಕೆಲವು ಕಡೆ ನಿರ್ವಹಣೆ ಮಾಡಲಾದ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದ್ದು, ಕೆಲವೇ ದಿನಗಳಲ್ಲಿ ಕುಸಿತಗೊಂಡ ನಿದರ್ಶನಗಳಿವೆ. "ಕರಾವಳಿ ತೀರದುದ್ದಕ್ಕೂ ಕಳಪೆ ಕಾಮಗಾರಿ ಕೈಗೊಂಡ ಗುತ್ತಿಗೆ ಸಂಸ್ಥೆಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಸರ್ಕಾರಕ್ಕೆ ಆದ ನಷ್ಟವನ್ನು ಅವರಿಂದಲೇ ಭರಿಸುವಂತೆ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂಬ ಕುರಿತು.**

**<u>ಉತ್ತರ</u>**

ಮೀನುಗಾರಿಕೆ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ರಾಜ್ಯದ ಕರಾವಳಿ ತೀರ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಇಲಾಖೆಯು ವಿವಿಧ ಏಜೆನ್ಸಿ / ಗುತ್ತಿಗೆದಾರ ರಿಂದ ಬಂದರು, ಜಟ್ಟಿಗಳು ಹಾಗೂ ಇತರೆ ಮೀನುಗಾರಿಕಾ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಮುಂದುವರೆದು ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಯಾವುದೇ ಕಾಮಗಾರಿಗಳಲ್ಲಿ ಕಳಪೆ ಗುಣಮಟ್ಟದ ನಿರ್ವಹಣೆ ನಡೆದಿರುವುದಿಲ್ಲ.

ಇಲಾಖೆಯ ಎಲ್ಲಾ ಕಾಮಗಾರಿಗಳನ್ನು ಅನುಮೋದಿತ ವಿನ್ಯಾಸಗಳು, ತಾಂತ್ರಿಕ ಮಾನದಂಡಗಳು ಹಾಗೂ ಸಂಬಂಧಿತ ನಿಯಮಾವಳಿಗಳಿಗೆ ಅನುಗುಣವಾಗಿ ನಿಗದಿತ ತಾಂತ್ರಿಕ ಮೇಲ್ವಿಚಾರಣೆಯೊಂದಿಗೆ ನಿರ್ವಹಿಸಲಾಗಿದ್ದು, ಗುಣಮಟ್ಟ ನಿಯಂತ್ರಣಕ್ಕೆ ವಿಶೇಷ ಮಹತ್ವ ನೀಡಲಾಗಿದೆ. ಕಾಮಗಾರಿಗಳ ನಿರ್ವಹಣೆಯ ಪ್ರತಿಯೊಂದು ಹಂತದಲ್ಲಿಯೂ ಸಂಬಂಧಿತ ಅಧಿಕಾರಿಗಳಿಂದ ಪರಿಶೀಲನೆ ನಡೆಸಿದ್ದು, ಯಾವುದೇ ರೀತಿಯ ಗುಣಮಟ್ಟದ ಲೋಪದಿಂದ ಕುಸಿತದ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೆ, ಗಂಗೊಳ್ಳಿ ಮೀನುಗಾರಿಕೆ ಬಂದರಿನ ಮರುನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಪ್ರಾಕೃತಿಕ ಕಾರಣಗಳಿಂದಾಗಿ ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿದ್ದ ಜೆಟ್ಟಿಯ ಪೈಲ್‌ಗಳಿಗೆ, ಹಳೆಯ ಡಯಾಫ್ರಾಮ್ ಗೋಡೆ ಕುಸಿದು ಹಾನಿಯಾಗಿರುತ್ತದೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ತೆಂಗಿನಗುಂಡಿ ಪ್ರದೇಶದಲ್ಲಿ ಕಾಂಕ್ರೀಟ್ ನೆಲಹಾಸು ಕುಸಿದಿರುತ್ತದೆ. ವಿವರಗಳು ಈ ಕೆಳಗಿನಂತಿದೆ:-

ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ಡಯಾಫ್ರಾಮ್ ಗೋಡೆ ಹಾಗೂ ಜೆಟ್ಟಿಯು ಕುಸಿದು ಹೋಗಿರುವುದರಿಂದ, ದಿನನಿತ್ಯ ಕೆಲಸ ಮಾಡುವ ಮೀನುಗಾರರ ಜೀವಕ್ಕೆ ಅಪಾಯವಾಗುವ ಸಂಭವವಿರುವುದರಿಂದ, ಮೊದಲಿಗೆ ಸದರಿ ಡಯಾಫ್ರಾರ್ಮ್ ಗೋಡೆ ಹಾಗೂ ಜೆಟ್ಟಿಯನ್ನು ದುರಸ್ತಿ ಕಾಮಗಾರಿಯನ್ನು ಮಾಡಲು ಉದ್ದೇಶಿಸಲಾಗಿತ್ತು.

ಆದರೆ, ಗಂಗೊಳ್ಳಿ ಮೀನುಗಾರಿಕೆ ಬಂದರಿನ ಸ್ಥಳೀಯ ಮೀನುಗಾರ ಮುಖಂಡರುಗಳು ಮೀನುಗಾರರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಸದರಿ ಯೋಜನೆಯನ್ನು ಮರುದುರಸ್ತಿ ಮಾಡುವ ಬದಲಾಗಿ ನೂತನವಾಗಿಯೇ ಉತ್ತಮ ರೀತಿಯ ಜೆಟ್ಟಿಯನ್ನು ನಿರ್ಮಿಸುವಂತೆ ಕೋರಿದನ್ವಯ ಕಾರ್ಯನಿರ್ವಾಹಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿ ಇವರು ರೂ.1200.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದ್ದು, ಸದರಿ ಅಂದಾಜು ಪಟ್ಟಿಯು ಸೂಕ್ತವಾಗಿರುತ್ತದೆ ಎಂದು ಸಿ.ಐ.ಸಿ.ಇ.ಎಫ್. ಬೆಂಗಳೂರು ಇವರು ತಾಂತ್ರಿಕ ಅಭಿಪ್ರಾಯವನ್ನು ನೀಡಿದ ಮೇರೆಗೆ ಗಂಗೊಳ್ಳಿ ಮೀನುಗಾರಿಕೆ ಬಂದರಿನಲ್ಲಿ ರೂ.1200.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಜೆಟ್ಟಿ ಮರುನಿರ್ಮಾಣವನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ ಪಸಂಮೀ/ಇ-106/ಮೀಇಯೋ/2019, ದಿನಾಂಕ: 20-02-2020 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ.

ಸದರಿ ಕಾಮಗಾರಿಯ ಅನುಷ್ಠಾನ ಸಂದರ್ಭದಲ್ಲಿ ದಿನಾಂಕ: 28-09-2022 ರಂದು ಹಳೆಯ ಡಯಾಫ್ರಾಮ್ ಗೋಡೆಯೊಂದರ ಭಾಗವು ಕ್ವೇ/ಜೆಟ್ಟಿ ರಚನೆ ಮೇಲೆ ಕುಸಿದಿದ್ದು, ಹೀಗಾಗಿ ನಿರ್ಮಾಣದಲ್ಲಿದ್ದ ಆರ್‌ಸಿ ಬೋರ್ಡ್ ಪೈಲ್ ಕ್ವೇ/ಜೆಟ್ಟಿ ರಚನೆಯ ಪೈಲುಗಳಿಗೆ ಗಂಭೀರ ಹಾನಿ ಸಂಭವಿಸಿದೆ. ಇದಕ್ಕೆ ಗಂಗೊಳ್ಳಿ ಬೇಸಿನ್‌ನಲ್ಲಿ ಪ್ರವಾಹದ ವೇಗವು ಹೆಚ್ಚಾಗಿರುವುದು, ಮತ್ತು ಹೈಡ್ರೋಗ್ರಾಫಿಕ್ ಸಮೀಕ್ಷೆ ಪ್ರಕಾರ ಸ್ಥಿರತೆಯ ಆಳದ ವ್ಯತ್ಯಾಸ (ಡಿಸೈನ್ ಹಂತದಲ್ಲಿ) ಮತ್ತು ಕೆಲವು ಸ್ಥಳಗಳಲ್ಲಿ ಟೈ ರಾಡ್‌ಗಳನ್ನು ಉದ್ದೇಶಪೂರ್ವಕವಲ್ಲದೆ ಕತ್ತರಿಸಿದ್ದು ಕುಸಿತಕ್ಕೆ ಕಾರಣವಾಗಿದೆ ಎಂದು ವರದಿಯಾಗಿರುತ್ತದೆ.

ಪೈಲ್‌ಗಳು (ಜೆಟ್ಟಿ) ಮೇಲೆ ಡಯಾಫ್ರಾಮ್ ವಾಲ್ ಕುಸಿದ ಪರಿಣಾಮ, ಪೈಲ್‌ಗಳಿಗೆ ಅಡ್ಡದಿಕ್ಕಿನಲ್ಲಿ ತಿರುಗುಹೋಗಿರುವ (lateral displacement) ಪರಿಣಾಮ ಉಂಟಾಗಿದೆ. ಆದ್ದರಿಂದ ಡಯಾಫ್ರಾಮ್ ವಾಲ್ ಮತ್ತು pile ಗಳ ಕುಸಿತದಿಂದ ಸೃಷ್ಟಿಯಾಗಿರುವ Debris ಗಳನ್ನು basin ನಿಂದ ತೆರವುಗೊಳಿಸಲು ಹಾಗೂ ದೋಣಿಗಳ ಸುಗಮ ಮತ್ತು ಸುಲಲಿತ ಚಾಲನೆಗಾಗಿ ಕಾಮಗಾರಿಯನ್ನು ಆದಷ್ಟು ಬೇಗನೆ ಮುಕ್ತಾಯಗೊಳಿಸಿ ಮೀನುಗಾರರಿಗೆ ಅನುಕೂಲ ಮಾಡಿಕೊಡಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ತೆಂಗಿನಗುಂಡಿ ಪ್ರದೇಶದಲ್ಲಿ 126 ಮೀಟರ್ ಉದ್ದದ ಜೆಟ್ಟಿಯನ್ನು Estuary ಬದಿಯಲ್ಲಿ ಹಾಗೂ 64 ಮೀಟರ್ ಉದ್ದದ ಜೆಟ್ಟಿಯನ್ನು CREEK ಬದಿಯಲ್ಲಿ ನಿರ್ಮಾಣ ಮಾಡಿದ್ದು, ಇದರ ಜೊತೆಯಲ್ಲಿ ಧಕ್ಕೆಯ ಹಿಂಭಾಗದಲ್ಲಿ ನೆಟ್ ಮೆಂಡಿಂಗ್ ಶೆಡ್ ಮತ್ತು ಸ್ಲೋಪಿಂಗ್ ಹಾರ್ಡ ನಿರ್ಮಾಣ ಮಾಡಿದ್ದು ಒಟ್ಟು 316 ಮೀಟರ್ ಉದ್ದಕ್ಕೆ ಜೆಟ್ಟಿಯನ್ನು ವಿಸ್ತರಿಸಲಾಗಿರುತ್ತದೆ. ಆದರೆ, ದಿನಾಂಕ: 14-06-2022 ರಂದು 126 ಮೀಟರ್ ಉದ್ದದ ಜೆಟ್ಟಿಯ ಪಶ್ಚಿಮ ಬದಿಯ ಹಿಂಭಾಗದಲ್ಲಿ ಸುಮಾರು 25 ಮೀಟರ್ ಉದ್ದ ಹಾಗೂ ಅಗಲಕ್ಕೆ ಕುಸಿದಿರುತ್ತದೆ. ಸದರಿ ಜೆಟ್ಟಿಯ ಪ್ರದೇಶದ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚಿನ ಭಾಗವು ಮರಳಿನ ದಿಬ್ಬದಿಂದ ಆವೃತಗೊಂಡಿದ್ದು ಮೀನುಗಾರಿಕೆ ಬೋಟುಗಳ ಸುಗಮ ಹಾಗೂ ಸುರಕ್ಷಿತ ಚಲನವಲನಕ್ಕೆ ಯೋಗ್ಯವಾಗಿಲ್ಲವಾದ್ದರಿಂದ ಇಲ್ಲಿ ಹೂಳನ್ನು ತೆಗೆಯುವ ಕೆಲಸ ಮಾಡಲಾಗಿತ್ತು. ಇದಲ್ಲದೇ ಗ್ರಾಯನ್/ಟ್ರೇನಿಂಗ್ ವಾಲ್ (Breakwater) ನಿರ್ಮಾಣದಿಂದ ನೀರಿನ ಹೊರಹರಿವು ಜಾಸ್ತಿಯಾಗಿದ್ದು, ಈ ನೀರಿನ ರಭಸಕ್ಕೆ ಜೆಟ್ಟಿಯ ಪಶ್ಚಿಮ ಭಾಗದ ಕೊನೆಯಲ್ಲಿ

ಇರುವ ಫೈಲುಗಳ ಮಧ್ಯದಿಂದ ನೀರು ಒಳಸೇರಿ ಜೆಟ್ಟಿಯ ಹಿಂಭಾಗದಲ್ಲಿ ಮಣ್ಣನ್ನು ತಡೆಯಲು ಅಳವಡಿಸುವ ಪ್ರಿಕಾಸ್ಟ್ ಸ್ಲಾಬ್‌ಗಳನ್ನು ಹೆಚ್ಚಿನ ಆಳದವರೆಗೆ ಅಳವಡಿಸದೇ ಇರುವುದರಿಂದ ಇವು ಕುಸಿದು ಕಾಂಕ್ರೀಟ್ ನೆಲಹಾಸಿನ ಮಣ್ಣು ಕೊಚ್ಚಿಹೋಗಿ ಅಲ್ಲಿನ ಭಾಗವು ಟೊಳ್ಳಾಗಿ ಮೇಲ್ಭಾಗದ ಕಾಂಕ್ರೀಟ್ ನೆಲಹಾಸು ಕುಸಿದಿರುತ್ತದೆ. ಸದರಿ ಕುಸಿತವು ಯಾವುದೇ ಕಳಪೆ ಕಾಮಗಾರಿಯಿಂದ ಆಗಿರುವುದಿಲ್ಲ ಹಾಗೂ ಜೆಟ್ಟಿಯಲ್ಲಿ ಯಾವುದೇ ಕುಸಿತವಾಗಿರುವುದಿಲ್ಲ ಎಂದು ವರದಿಸಲಾಗಿದೆ. ಕುಸಿದಿರುವ ಕಾಂಕ್ರೀಟ್ ನೆಲಹಾಸನ್ನು ದುರಸ್ತಿಪಡಿಸಲು ಪರಿಷ್ಕೃತ ವಿನ್ಯಾಸದೊಂದಿಗೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಸಂಖ್ಯೆ: ಪಸಂಮೀ ಇ-217 ಮೀಇಇ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು